# ಮಗುವಿನ ಆರೋಗ್ಯ ಮತ್ತು ಪೌಷ್ಠಿಕತೆಯ ನಿರ್ವಹಣೆಯಲ್ಲಿ – ಅಂಗನವಾಡಿ ಕಾರ್ಯಕರ್ತೆಯ ಪಾತ್ರ





ಅಪೌಷ್ಠಿಕತೆಯನ್ನು ತಡೆಗಟ್ಟುವುದಕ್ಕಾಗಿ ಅವಶ್ಯಕ ಸಂದೇಶಗಳನ್ನು ಪ್ರಸಾರ ಮಾಡಬೇಕು.



ಹಸುಕೂಸುಗಳು ಮತ್ತು ಎಳೆಯ ಮಕ್ಕಳಿಗೆ ಹಾಲುಣಿಸುವ ಕ್ರಮಗಳು ಹಾಗೂ ಆರೋಗ್ಯ ಮತ್ತು ಪೌಷ್ಠಿಕಾಂಶ ಸೇವೆಗಳನ್ನು ಪಡೆಯುವುದಕ್ಕೆ ಸಂಬಂಧಿಸಿದಂತೆ ಕುಟುಂಬಗಳಿಗೆ ಸಲಹೆ ಮತ್ತು ಮಾರ್ಗದರ್ಶನಗಳನ್ನು ನೀಡಬೇಕು.



ಮನೆಗಳಿಗೆ ಭೇಟಿ ನೀಡಬೇಕು ಐದು ವರ್ಷದೊಳಗಿನ ಮಕ್ಕಳಲ್ಲಿ ಅಪೌಷ್ಠಿಕತೆಯನ್ನು ತಡೆಗಟ್ಟುವುದಕ್ಕಾಗಿ ಹಾಗೂ ಅಪೌಷ್ಠಿಕತೆಯಿಂದ ಬಳಲುತ್ತಿರುವ ಮಕ್ಕಳಿಗೆ ಅವುಗಳನ್ನು ಒದಗಿಸುವುದಕ್ಕಾಗಿ ಸೂಕ್ತವಾದ ಸಲಹೆ ಮತ್ತು ಮಾರ್ಗದರ್ಶನಗಳನ್ನು ನೀಡಬೇಕು.



ಮಕ್ಕಳ ಅಪೌಷ್ಠಿಕತೆಯನ್ನು ತಿಳಿದುಕೊಂಡು; ಕೆಲವೊಂದು ಪ್ರಕರಣಗಳನ್ನು ಆಸ್ಪತ್ರೆಗೆ ಕಳಿಸುವುದು ಸೇರಿದಂತೆ ಅಪೌಷ್ಠಿಕತೆ ಗ್ರೇಡ್‌ಗಳನ್ನು ನಿರ್ಧರಿಸಬೇಕು.



ರೋಗ ನಿರೋಧಕ ಚುಚ್ಚುಮದ್ದು ಅಗತ್ಯವಿರುವ ಮಕ್ಕಳನ್ನು ಗುರುತಿಸಿ ಕೊಡಿಸುವ ವ್ಯವಸ್ಥೆ ಮಾಡಬೇಕು.




ಮಾಸಿಕವಾಗಿ ಗ್ರಾಮೀಣ ಆರೋಗ್ಯ ಮತ್ತು ಪೌಷ್ಠಿಕಾಂಶ ದಿನಾಚರಣೆ ಮತ್ತು ಇ.ಸಿ.ಸಿ.ಇ. ದಿನಾಚರಣೆಗಳನ್ನು ಆಚರಿಸಬೇಕು ಮತ್ತು ಸಮಸ್ಯೆಗಳನ್ನು ಚರ್ಚಿಸಬೇಕು.



ಗ್ರಾಮೀಣ ಆರೋಗ್ಯ ಮತ್ತು ಪೌಷ್ಠಿಕಾಂಶ ದಿನಾಚರಣೆ ಗಾಗಿ ಕುಟುಂಬಗಳನ್ನು ಒಂದುಗೂಡಿಸಬೇಕು. ಬಡವರು ಮತ್ತು ಅವಕಾಶವಂಚಿತರಿಗೆ ಅಗತ್ಯವಿರುವ ಸೇವೆಗಳು ಸಿಗುತ್ತಿವೆ ಎಂಬುದನ್ನು ಖಚಿತಪಡಿಸಬೇಕು.




ಮಕ್ಕಳಲ್ಲಿರುವ ಅಪಾಯದ ಚಿಹ್ನೆಗಳನ್ನು ಅರಿತುಕೊಂಡು ಸೂಕ್ತವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು.



ಅತಿಸಾರ ಬಗ್ಗೆ ತಿಳಿದುಕೊಳ್ಳಬೇಕು, ಇದನ್ನು ತಡೆಗಟ್ಟುವುದು, ಓ.ಆರ್.ಎಸ್. ಉಪಯೋಗಿಸುವುದು ಹಾಗೂ ಪ್ರಕರಣ ಗಂಭೀರವಾದಲ್ಲಿ ಡಾಕ್ಟರರನ್ನು ಸಂಪರ್ಕಿಸುವ ಬಗ್ಗೆ ಸೂಕ್ತವಾದ ಸಲಹೆ ಮತ್ತು ಮಾರ್ಗದರ್ಶನ ನೀಡಬೇಕು.



ಶ್ವಾಸಕೋಶದ ಸೋಂಕು ತಗುಲಿರುವ ಪ್ರಕರಣಗಳನ್ನು ಪತ್ತೆ ಮಾಡಬೇಕು ಮತ್ತು ಅವುಗಳನ್ನು ಆಸ್ಪತ್ರೆಗೆ ಕಳಿಸಬೇಕು ಹಾಗೂ ಕಡಿಮೆ ತೂಕದೊಂದಿಗೆ ಜನಿಸಿದ ಮಗುಗಳ ಬಗ್ಗೆ ಆರೈಕೆಯನ್ನು ಖಚಿತಪಡಿಸಬೇಕು.




ಎಲ್ಲಾ ಕುಟುಂಬಗಳಿಗೂ "ತಾಯಿ ಮತ್ತು ಮಗುವಿನ ಸುರಕ್ಷೆ ಕಾರ್ಡ್" ಸಿಗುತ್ತಿವೆ ಎಂಬುದನ್ನು ಖಚಿತಪಡಿಸಬೇಕು